KAN 301.2 Reg. No. ..................................

ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ
ಅಕ್ಟೋಬರ್ – 2012
ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿ. 1X5=5

1) ಶರರೂಪದೊಳಿರೆ ನಿನ್ನಂ
ಶರಮೆಂದಾಂ ತೊಟ್ಟೆನರಿದು ತುಡುವೆನೆ ನಿನ್ನಂ
ನೆರದೊಳ್ ಕೊಲ್ವಂತೆನಗೇ
ನರಿಯನೆ ಗಾಂಡೀವಧನ್ವನೆಂಬುದು ಮಾಗಳ್

2) ಕೊರಳಿಗೆ ಹತ್ತಿದೆ
ಸಾಲದ ಶೂಲ!
ಆದರು ಬರದೋ
ಯಮನಿಗೆ ಕರುಣ
ಉಸಿರಿಗೆ ಒಮ್ಮೆ
ಜನನಾ ಮರಣಾ

ಆ) ಎರಡು ಸಾಲುಗಳಿಗೆ ಸಂದರ್ಭಸಹಿತ ವಿವರಣೆ ನೀಡಿ. 2X3=6

1) ಪರಹಿತನಿರತಾತ್ಮ ನಪ್ಪವಂಗರಿದುಂಟೇ
2) ತಂದೆಯೆ! ಮ ಮಾತ್ಮವಂ ನಿನ್ನ ಕೆಯ್ಯೊಪ್ಪಿಸುವೆ!
3) ನಿಮ್ಮಂಥೋರು ಏನ್ ಮಾಡುದ್ರೂ ಸೈ ಅನ್ಕೊಂಡಿದ್ದೀರಾ?

ಇ) ಒಂದು ಪ್ರಶ್ನೆಗೆ ಉತ್ತರಿಸಿ. 1X10=10

1) ಪಂಪನು ಚಿತ್ರಿಸಿರುವ ಕರ್ಣನ ಪಾತ್ರದ ವೈಶಿಷ್ಟ್ಯವನ್ನು ವಿವರಿಸಿರಿ.
2) 'ಭೀಷ್ಮರಿಗೆ ಶ್ಯಾಪ' ಜನಪದ ಕಾವ್ಯದ ಸ್ವಾರಸ್ಯವನ್ನು ನಿರೂಪಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿ. 1X7=7

1) ಶಿವಭೂತಿಯ ವ್ಯಕ್ತಿತ್ವವನ್ನು ನಿರೂಪಿಸಿರಿ.
2) ಏಸುವಿನ ಮಹಾತ್ಯಾಗವನ್ನು ಗೊಲ್ಗೊಥಾ ಕವಿತೆಯಲ್ಲಿ ಹೇಗೆ ಚಿತ್ರಿಸಲಾಗಿದೆ?

II. ಅ) ಒಂದು ಪ್ರಶ್ನೆಗೆ ಉತ್ತರಿಸಿ. 1X10=10

1) ಮರಗಳು ಮಾನವನ ಬದುಕಿಗೆ ಹೇಗೆ ಮಹತ್ವಪೂರ್ಣವಾಗಿವೆ? ಅ.ರಾ.ಮಿತ್ರರ ಚಿಂತನೆಗಳನ್ನು ವಿವರಿಸಿರಿ.
2) ಮೇರಿಕ್ಯೂರಿಯ ಜೀವನ ಸಾಧನೆಯನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. 1X7=7

1) ಮೆಣಸಿನ ಕಾಯಿಯ ಇತಿಹಾಸ – ವರ್ತಮಾನಗಳನ್ನು ನಿರೂಪಿಸಿರಿ.
2) ವಿಜ್ಞಾನ ವಿಚಾರಕ್ಕೆ ಸಂಬಂಧಿಸಿದಂತೆ ಲೇಖನವೊಂದನ್ನು ಬರೆಯಿರಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿ. 1X6=6

1) ವಿಜ್ಞಾನ ಲೇಖನ ಬರೆಯುವ ಬಗೆಯನ್ನು ವಿವರಿಸಿರಿ.
2) ವಿಜ್ಞಾನಿಯೊಬ್ಬರ ಬಗ್ಗೆ ಲೇಖನವೊಂದನ್ನು ಬರೆಯಿರಿ.

ಆ) <u>ಒಂದು</u> ಪ್ರಶ್ನೆಗೆ ಉತ್ತರಿಸಿ. 1X3=3

1) ವಿಜ್ಞಾನ ಲೇಖನದ ಬರವಣಿಗೆಗೆ ಮಾಡಬೇಕಾದ ಪೂರ್ವ ಸಿದ್ಧತೆಗಳು ಯಾವುವು?
2) ಭಾರತೀಯ ಮಹಿಳಾ ಗಗನಯಾತ್ರಿಯ ಕುರಿತು ಬರೆಯಿರಿ.

IV. ಅ) <u>ಒಂದು</u> ಪ್ರಶ್ನೆಗೆ ಉತ್ತರಿಸಿ. 1X10=10

1) 'ಅವಿಭಕ್ತರು' ಕಾದಂಬರಿಯಲ್ಲಿ ಅವಿಭಕ್ತ ಕುಟುಂಬವೊಂದು ವಿಭಕ್ತತೆಯೆಡೆಗೆ ಚಲಿಸುವ ನೆಲೆ' ಹೇಗೆ ಚಿತ್ರಿತವಾಗಿದೆ? ವಿವರಿಸಿ.
2) ಐತಪ್ಪ ಗಟ್ಟಿಯ ಪಾತ್ರವು ಕಾದಂಬರಿಯಲ್ಲಿ ಕೇಂದ್ರಪಾತ್ರವಾಗಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

ಆ) <u>ಒಂದು</u> ಪ್ರಶ್ನೆಗೆ ಉತ್ತರಿಸಿ. 1X5=5

1) ರಾಧೆ ಮತ್ತು ಶಿವಪ್ಪರ ವೈವಾಹಿಕ ಬಾಳಿನ ಕುರಿತು ಬರೆಯಿರಿ.
2) ಗಡಿಯಾರ ಮತ್ತು ಬೊಳ್ಳುವಿನ ಪಾತ್ರ ಚಿತ್ರಣದ ಕುರಿತು ಬರೆಯಿರಿ.

V. ಅ) <u>ಎರಡಕ್ಕೆ</u> ಟಿಪ್ಪಣಿ ಬರೆಯಿರಿ. 2X3=6

1) ಶಲ್ಯ
2) ದ.ರಾ.ಬೇಂದ್ರೆ
3) ಗೊಲ್ಗೊಥಾ

ಆ) <u>ಒಂದು</u> ವಾಕ್ಯದಲ್ಲಿ ಉತ್ತರಿಸಿ. 1X5=5

1) ಪಂಪನು ಯಾವ ಅರಸನ ಆಸ್ಥಾನದಲ್ಲಿ ಕವಿಯಾಗಿದ್ದನು?
2) ಪಂಚತಂತ್ರವನ್ನು ಕನ್ನಡದಲ್ಲಿ ಬರೆದ ಕವಿ ಯಾರು?
3) ಚಿಪ್ಕೊ ಚಳುವಳಿಯ ನಾಯಕ ಯಾರು?
4) ವಿಜ್ಞಾನ ರಂಗದಲ್ಲಿ ಮೊತ್ತ ಮೊದಲಿಗ ಬಾರಿಗೆ ನೊಬೆಲ್ ಪ್ರಶಸ್ತಿ ಪಡೆದ ಮಹಿಳಾ ವಿಜ್ಞಾನಿ ಯಾರು?
5) 'ಹಸುರು ಹೊನ್ನು' – ಯಾರ ಕೃತಿ?

**********

 Reg. No. ..................................

ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ

ಅಕ್ಟೋಬರ್ 2013

ಕನ್ನಡ ಭಾಷಾ ಪತ್ರಿಕೆ – III

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿರಿ: 5

1) ಕುಡುಮಿಂಚಿನ ಸಿಡಿಲುರುಳಿಯೊ
ಳೊಡಂಬಡಂ ಪಡೆಯೆ ಕರ್ಣನೊಡಲಿಂದಾಗಳ್
ನಡೆ ನೋಡೆ ನೋಡೆ ದಿನಪನೊ
ಳೊಡಗೂಡಿದುದೊಂದು ಮೂರ್ತಿ ತೇಜೋ ರೂಪಂ

2) ತಾನನ್ನೆಗಂ ಬೀರಿದಕ್ಕರೆಯ ಬಲೆಯಂತೆ, ಬೋಧಿಸಿದ
ನಿತ್ಯ ಜೀವನದ ಧವಳಿಮೆಯಂತೆ, ತನ್ನಾತ್ಮ
ದಮೃತತತ್ವದಂತೆ ವಿಸಟಂಬರಿಯೆ ಬೆಳದಿಂಗ
ಳೆತ್ತಲುಂ ನಿಷ್ಪಂದಮೆತ್ತಲುಂ ಶಾಂತಂ

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ: 6

1) ಪರಹಿತನಿರತಾತ್ಮ ನಪ್ಪವಂಗರಿದುಂಟೇ
2) ಉಸಿರಿಗೆ ಒಮ್ಮೆ ಜನನಾ ಮರಣಾ
3) ತಪ್ಪು ಯಾವುದು? ತಪ್ಪಲ್ಲದ್ದು ಯಾವುದು?

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ: 10

1) ಕರ್ಣನ ಶೌರ್ಯ 'ಕರ್ಣ ರಸಾಯನಮಲ್ತೆ ಭಾರತಂ' ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.
2) ಶಿವಭೂತಿಯ ಕಥೆಯಲ್ಲಿ ನಿರೂಪಿತವಾಗಿರುವ ನೀತಿಯನ್ನು ವಿವೇಚಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: 7

1) ರೈತನ ದುಃಖವನ್ನು 'ಭೂಮಿ ತಾಯಿಯ ಚೊಚ್ಚಿಲ ಮಗ' ಕವಿತೆ ಹೇಗೆ ಚಿತ್ರಿಸಿದೆ?
2) 'ಭೀಷ್ಮರಿಗೆ ಶ್ಯಾಪ'-ಜನಪದ ಗೀತೆಯ ಸ್ವಾರಸ್ಯವನ್ನು ನಿರೂಪಿಸಿರಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 10

1) ಮೆಣಸಿನ ಕಾಯಿಯ ಇತಿಹಾಸ-ಪ್ರಸರಣವನ್ನು ವಿವರಿಸಿರಿ.
2) ಮೇರಿ ಕ್ಯೂರಿಯ ಜೀವನ ಸಾಧನೆಯ ಕುರಿತು ಬರೆಯಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 7

1) 'ಅಪ್ಪಿಕೋ' ಲೇಖನದ ಮೂಲಕ ಅ.ರಾ.ಮಿತ್ರರು ವ್ಯಕ್ತಪಡಿಸುವ ಪರಿಸರ ಪ್ರೇಮವನ್ನು ವಿವರಿಸಿರಿ.
2) ಸಮಾಜದ ಉನ್ನತಿಗೆ ವಿಜ್ಞಾನದ ಕೊಡುಗೆಯ ಕುರಿತು ಪ್ರಬಂಧವನ್ನು ಬರೆಯಿರಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. 10

1) ಹಿರಿಯರ ಕುರಿತು ಕಿರಿಯರು ತೋರುವ ಅನಾದರ 'ಅವಿಭಕ್ತರು' ಕಾದಂಬರಿಯಲ್ಲಿ ಹೇಗೆ ಚಿತ್ರಿತವಾಗಿದೆ?

2) ಮಾತೃಮೂಲೀಯ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ದೊರೆಯುವ ಸ್ಥಾನಮಾನಗಳ ಕುರಿತು ಬರೆಯಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 5

1) ಶ್ರೀನಿವಾಸನ ಪಾತ್ರ ಚಿತ್ರಣ ನೀಡಿರಿ.

2) ಐತಪ್ಪ ಗಟ್ಟಿಯ ಪಾತ್ರದ ಕುರಿತು ಬರೆಯಿರಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 6

1) ವಿಜ್ಞಾನ ಲೇಖನಗಳನ್ನು ಬರೆಯುವ ವಿಧಾನವನ್ನು ವಿವರಿಸಿರಿ.

2) ವಿಜ್ಞಾನಿಯೊಬ್ಬರ ಜೀವನ ಸಾಧನೆಗಳನ್ನು ಕುರಿತು ಬರೆಯಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 3

1) ವಿಜ್ಞಾನ ಲೇಖನ ಬರೆಯಲು ಮಾಡಬೇಕಾಗಿರುವ ಪೂರ್ವ ಸಿದ್ಧತೆಗಳನ್ನು ಕುರಿತು ಬರೆಯಿರಿ.

2) ವಿಜ್ಞಾನ ಸಂಶೋಧನೆಗಳ ಸದ್ಬಳಕೆಯ ಕುರಿತು ಕಿರು ಲೇಖನ ಬರೆಯಿರಿ.

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ: 6

1) ದುರ್ಗಸಿಂಹ

2) ಗೊಲ್ಗೊಥಾ

3) ದ.ರಾ.ಬೇಂದ್ರೆ

ಆ) ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 5

1) ಪಂಪನ ಎರಡು ಕೃತಿಗಳನ್ನು ಹೆಸರಿಸಿರಿ.

2) 'ನಾಕು ತಂತಿ' ಯಾರ ಕೃತಿಯಾಗಿದೆ?

3) ದುರ್ಗಸಿಂಹನು ಯಾರ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದನು?

4) 'ಅವಿಭಕ್ತರು' ಯಾರು ರಚಿಸಿದ ಕಾದಂಬರಿಯಾಗಿದೆ?

5) ಚಿಪ್ಕೊ ಚಳವಳಿಯ ನೇತಾರ ಯಾರು?

**********

KAN 301.2

**ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ – ಅಕ್ಟೋಬರ್ 2014**

**ಕನ್ನಡ ಭಾಷಾಪತ್ರಿಕೆ–3**

**ಸಮಯ: 3 ಘಂಟೆ** **ಅಂಕಗಳು: 80**

I **(ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** 5

(1) ಶರರೂಪದೊಳಿರೆ ನಿನ್ನಂ
ಶರಮೆಂದಾಂ ತೊಟ್ಟೆನರಿದು ತುಡುವೆನೆ ನಿನ್ನಂ
ನೆರದೊಳ್ ಕೊಲ್ವಂತೆನಗೇ
ನರಿಯನೆ ಗಾಂಡೀವಧನ್ವನೆಂಬುದುಮಾಗಳ್

(2) ಗಡಗಡನೆ ಪೊಡವಿ ನಡುಗಿತು, ದುಃಖವಾರ್ತೆಯಂ
ಜಗಕೆಲ್ಲ ಕೇಳಿಸುವ ಮೃತಕದುಂದುಭಿಯಂತೆ
ನೆರೆದರೆದೆಯೆದೆ ಭೀತಿಯಿಂದ ಮಾರ್ಮೊಳಗಿದುದು
ಕಾವಲಿನ ರೋಮಕ ಶತಾಧಿಪತಿ ಕುದುರೆಯಲಿ
ಜೂಗಳಿಸೆ, ಕೆಳಗಿಳಿದು ಸೀಸಕಂ ತೆಗೆದಿವಂ
ದೇವ ತನಯಂಗಡಾ! ಎಂದು ವಿಸ್ಮಯದೊಳಾ
ಹಗಲ ತಿಂಗಳನೆ ಎವೆಯಿಕ್ಕದೀಕ್ಷಿಸಿದಂ.

**ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 6

(1) ಪೊಲ್ಲುದು ಪೊಲ್ಲದೆ ಪರೋಪಕಾರವ್ಯಸನಂ
(2) ಜನುಮವೆಂಬುವಾ ಕತ್ತಲೆಯಲ್ಲಿ ಬಿದ್ದಿದೆ ಒಳಗೆ ಹೇಗೋ ಬಂದು !
(3) ಆ ವಿಧಿ ನಿಯಮ ಯಾವ ರೀತಿ ಇದೆಯೋ ಆ ರೀತಿಯೇ ಆಗಲಿ.

**ಇ) ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) 'ಕರ್ಣ ರಸಾಯನಮಲ್ತೆ ಭಾರತಂ' ಕಾವ್ಯಭಾಗದಲ್ಲಿ ಕರ್ಣನ ವ್ಯಕ್ತಿತ್ವ ಹೇಗೆ ಚಿತ್ರಿತವಾಗಿದೆ? ವಿವರಿಸಿ.
(2) ನೀಚನಾದವನಿಗೆ ಉಪಕಾರ ಮಾಡಿದರೆ ಅವನು ಅಪಕಾರವನ್ನೇ ಬಗೆಯುತ್ತಾನೆ – ಎಂಬ ವಿಚಾರವು 'ಶಿವಭೂತಿಯ ಕಥೆ'ಯಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿರಿ.

**ಈ) ಒಂದು ಪ್ರಶ್ನೆಗೆ ಉತ್ತರಿಸಿರಿ** 7

(1) ರೈತನ ಅಳಲನ್ನು 'ಭೂಮಿತಾಯಿಯ ಚೊಚ್ಚಿಲ ಮಗ' ಕವಿತೆಯಲ್ಲಿ ಹೇಗೆ ಚಿತ್ರಿಸಲಾಗಿದೆ?
(2) ಭೀಷ್ಮರಿಗೆ ಶಾಪ ಬಂದ ಸಂದರ್ಭವನ್ನು ನಿರೂಪಿಸಿರಿ.

II **ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 10

(1) ಮೇರಿಕ್ಯೂರಿಯವರ ಬದುಕು ಹಾಗೂ ಸಾಧನೆಯನ್ನು ವಿವರಿಸಿರಿ.
(2) ಮರಗಳ ಕುರಿತಂತೆ ಅ.ರಾ. ಮಿತ್ರರ ಚಿಂತನೆಗಳನ್ನು ಬರೆಯಿರಿ.

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 7

(1) ಮೆಣಸಿನ ಕಾಯಿಯ ಇತಿಹಾಸವನ್ನು ಸ್ವಾಮಿಯವರು ಹೇಗೆ ನಿರೂಪಿಸಿದ್ದಾರೆ?
(2) ವಿಜ್ಞಾನದ ಒಳಿತು–ಕೆಡುಕುಗಳನ್ನು ಕುರಿತಂತೆ ಲೇಖನವನ್ನು ರಚಿಸಿರಿ.

III ಅ) **ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 10

(1) ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಪಲ್ಲಟಗೊಳ್ಳುತ್ತಿರುವ ಚಿತ್ರಣ 'ಅವಿಭಕ್ತರು' ಕಾದಂಬರಿಯಲ್ಲಿ ಹೇಗೆ ಒಡಮೂಡಿದೆ? ವಿವರಿಸಿರಿ.

(2) ಐತಪ್ಪ ಗಟ್ಟಿ ಪಾತ್ರವು ಕಾದಂಬರಿಯ ಕೇಂದ್ರ ಪಾತ್ರವಾಗಿದೆ. ವಿವೇಚಿಸಿರಿ.

ಆ) **ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 5

(1) ರಾಧೆ ಮತ್ತು ಶಿವಪ್ಪರ ವೈವಾಹಿಕ ಬಾಳನ್ನು ಚಿತ್ರಿಸಿರಿ.

(2) ಕಾದಂಬರಿಯಲ್ಲಿ ಬರುವ ಸಂಕಮ್ಮ ಪಾತ್ರದ ಕುರಿತು ಬರೆಯಿರಿ.

IV ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ** 6

(1) ವಿಜ್ಞಾನ ಲೇಖನ ಬರೆಯುವಾಗ ಗಮನಿಸಬೇಕಾದ ಅಂಶಗಳೇನು? ವಿವರಿಸಿರಿ.

(2) ಜಲಮಾಲಿನ್ಯಕ್ಕೆ ಕಾರಣ ಮತ್ತು ಅದರಿಂದಾಗುವ ಪರಿಣಾಮಗಳನ್ನು ಕುರಿತು ಬರಿಯಿರಿ.

ಆ) **ಒಂದು ವಾಕ್ಯದಲ್ಲಿ ಸಂಕ್ಷಿಪ್ತವಾಗಿ ಉತ್ತರಿಸಿರಿ** 3

(1) ವಿಜ್ಞಾನ ಕ್ಷೇತ್ರಕ್ಕೆ ಭಾರತೀಯ ವಿಜ್ಞಾನಿಗಳ ಕೊಡುಗೆಯನ್ನು ಬರೆಯಿರಿ.

(2) ವಿಜ್ಞಾನ ಲೇಖನ ಬರೆಯುವವರಿಗೆ ಲೇಖಕರು ಕೊಡುವ ಸಲಹೆಗಳನ್ನು ತಿಳಿಸಿರಿ.

V ಅ) **ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** 6

(1) ಎಂ. ಗೋವಿಂದ ಪೈ

(2) ಶಲ್ಯ

(3) ನೇಮಿಚಂದ್ರ

ಆ) **ಒಂದು ವಾಕ್ಯದಲ್ಲಿ ಉತ್ತರಿಸಿರಿ** 5

(1) ಚಿಪ್ಕೊ ಚಳುವಳಿಯ ನಾಯಕ ಯಾರು?

(2) ಬಿ.ಜಿ.ಎಲ್. ಸ್ವಾಮಿಯವರ ಕೃತಿಯೊಂದನ್ನು ಬರೆಯಿರಿ.

(3) ಯೇಸುವನ್ನು ಶಿಲುಬೆಗೇರಿಸಿದ ಸ್ಥಳ ಯಾವುದು?

(4) ಕನ್ನಡ ಪಂಚತಂತ್ರವನ್ನು ಬರೆದ ಕವಿ ಯಾರು?

(5) ಪಂಪನು ಯಾರ ಆಸ್ಥಾನದಲ್ಲಿ ಕವಿಯಾಗಿದ್ದನು?

*****

KAN 302.2

ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ – ಅಕ್ಟೋಬರ್ 2015

ಕನ್ನಡ ಭಾಷಾಪತ್ರಿಕೆ–3

ಸಮಯ: 3 ಘಂಟೆ ಅಂಕಗಳು: 80

I (ಅ) ಒಂದು ಪದ್ಯ ಭಾಗದ ಸಂದರ್ಭ ಸೂಚಿಸಿ, ಕಾವ್ಯ ಸಂದರ್ಭದಲ್ಲಿ ಆ ಭಾಗದ ಮಹತ್ವವನ್ನು ವಿವೇಚಿಸಿ. 1×5 = 5

(1) ಅರಿಗಳ್ ಪಾಂಡವರವರೊಳ್
ವಿರೋಧಮಂ ಬಿಸುಟು ಸಂಧಿಯಂ ಮಾಡುವುದೆಂ
ಬರಮಾತಂ ಕೇಳಿಸಲೆ
ನ್ನೆರಡುಂ ಕಿವಿಗಳನದೇಕೆ ಬಿದಿ ಮಾಡಿದನೋ ॥

(2) ಬಂದಳದೋ ಭಕ್ತೆ–ಗಿರಿಬಾಲೆ
ನಾಡಬಂಧನದಿಂದ ಬಿಡಿಸಿಕೊಂಡಾಕೆ
ಗುಟ್ಟಾಗಿ ಮುಟ್ಟಿ ಮುದಗೊಂಡು
ಬೆರಗೊಡೆದು ಧನ್ಯಳಾದಳು – 'ಅಯ್ಯಪ್ಪಾ'
ಪರಮಾನಂದದಲ್ಲಿ ಪಿಸುಗುಟ್ಟಿದವಳು

ಆ) ಯಾವುದಾದರೂ ಎರಡು ಸಾಲುಗಳಿಗೆ ಸಂದರ್ಭಸಹಿತ ವಿವರಣೆ ನೀಡಿ 3×2 = 6

(1) ನೆಲಕಿರಿವೆನೆಂದು ಬಗೆವಿರೆ ಛಲಕಿರಿವೆಂ
(2) ಮಾಯದ ಸಂಸಾರದಲ್ಲಿ ಸಿಲುಕಿದೆನು
(3) ಹೊತ್ತು ಹೊತ್ತಿಗೆ ಬ್ಯಾನೆ ಕತ್ತೀಲಿ ಕಡಿದಂಗೆ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 1×10 = 10

(1) ದುರ್ಯೋಧನನ ಮಾನಸಿಕ ತುಯ್ದಾಟಗಳು ರನ್ನನ ಕಾವ್ಯದಲ್ಲಿ ಒಡಮೂಡಿಬಂದ ಬಗೆಯನ್ನು ವಿವರಿಸಿ.
(2) ಅಕ್ಕಮಹಾದೇವಿಯ ವಚನಗಳಲ್ಲಿ ಕಂಡುಬರುವ ಆತ್ಮಾವಲೋಕನವನ್ನು ವಿವರಿಸಿ.

ಈ) ಯಾವುದಾದರೂ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 1×7 = 7

(1) ಸೀತೆಯನ್ನು ಅಪಹರಿಸಲು ರಾವಣನನ್ನು ಶೂರ್ಪನಖಿ ಸಿದ್ಧಗೊಳಿಸಿದ ಬಗೆ ಹೇಗೆ?
(2) ಧಾರ್ಮಿಕ ಹಾಗೂ ಸಾಮಾಜಿಕ ಅಸಮಾನತೆಯನ್ನು ಮುಟ್ಟು ಕವನದಲ್ಲಿ ಬಿ.ಟಿ. ಲಲಿತಾ ನಾಯಕ್ ಪ್ರತಿಭಟಿಸಿದ ಬಗೆ ಹೇಗೆ?

II ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 1×10 = 10

(1) ಮಲೆನಾಡಿನ ಸ್ನಾನದ ವೈಶಿಷ್ಟ್ಯವೇನು? ವಿವರಿಸಿ.
(2) ವೈಚಾರಿಕತೆಯ ಬಗೆಗೆ ಡಾ. ಎಚ್. ನರಸಿಂಹಯ್ಯನವರ ಅಭಿಪ್ರಾಯವನ್ನು ನಿರೂಪಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 1×7 = 7

(1) ಮೋಂತುವಿನ ವ್ಯಕ್ತಿತ್ವವನ್ನು ನಿರೂಪಿಸಿ.
(2) ಹೆಣ್ಣಿನ ಕುರಿತಾಗಿರುವ ಪುರುಷ ಸಮಾಜದ ತೀರ್ಮಾನಗಳೇನು? ವಿವರಿಸಿ.

45 10/10

III ಅ) **ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 1×10 = 10

(1) 'ಕ್ರಾಂತಿಕಾರಕ ಬದಲಾವಣೆಯೊಂದಕ್ಕೆ ಹಳ್ಳಿಯೊಂದು ಮುಖಾಮುಖಿಯಾಗುವ ಮೂಲಕ ಹೇಗೆ ಪ್ರತಿಕ್ರಿಯಿಸುತ್ತದೆ' ಎಂಬುದನ್ನು ಕಾದಂಬರಿಕಾರರು ತೆರೆದಿಟ್ಟ ಬಗೆ ಹೇಗೆ? ವಿವರಿಸಿ.

(2) 'ಬೆಟ್ಟಸಾಲು ಮಳೆ' ಕಾದಂಬರಿಯಲ್ಲಿ ಸಮಾಜದ ಎಲ್ಲಾ ಸ್ತರದಲ್ಲಿಯೂ ಶೋಷಣೆಯ ಸ್ಪಷ್ಟ ಚಿತ್ರ ಸಾಂಕೇತಿಕವಾಗಿ ವ್ಯಕ್ತವಾಗಿದೆ'. ಈ ಮಾತನ್ನು ವಿಶ್ಲೇಷಿಸಿ.

ಆ) **ಯಾವುದಾದರೂ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 1×7 = 7

(1) ಹೊನ್ನನ ಪಾತ್ರವನ್ನು ಪರಿಚಯಿಸಿರಿ.

(2) ಅಮಾಯಕರ ಮೇಲಾಗುವ ಪೋಲಿಸ್ ದೌರ್ಜನ್ಯವನ್ನು ಕಾದಂಬರಿಕಾರ ಅನಾವರಣಗೊಳಿಸಿದ ಬಗೆ ಹೇಗೆ?

IV ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ** 1×6 = 6

(1) ಸಮೂಹ ಮಾಧ್ಯಮಗಳ ಸ್ವರೂಪವನ್ನು ವಿವರಿಸಿ.

(2) ಸಂಪಾದಕರಿಗೆ ಪತ್ರ ಎಂದರೇನು? ವಿವರಿಸಿ.

V ಅ) **ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ.** 3×2 = 6

(1) ರನ್ನ

(2) ಪಾರ್ತಿಸುಬ್ಬ

(3) ಕುವೆಂಪು

ಆ) **ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ** 1×6 = 6

(1) ನದೀನಂದನ ಯಾರು?

(2) ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು?

(3) 'ಅಜ್ಜಯ್ಯನ ಅಭ್ಯಂಜನ' ಪ್ರಬಂಧವನ್ನು ಕುವೆಂಪುರವರ ಯಾವ ಕೃತಿಯಿಂದ ಆರಿಸಲಾಗಿದೆ?

(4) 'ಹೋರಾಟದ ದಾರಿ' ಆತ್ಮಕಥನದ ಕರ್ತೃ ಯಾರು?

(5) ಅಂಕಣ ಬರಹ ಎಂದರೇನು?

(6) ನಿಯತಕಾಲಿಕಗಳು ಎಂದರೇನು?

*****